# ಕೆಲಸದ ಮೌಲ್ಯ

ಅಧ್ಯಾಯ ೧೩

"ನೀವು ಯಾವುದಾದರೊಂದು ಕೆಲಸವನ್ನು ಮಾಡುವಾಗ, ಅದರಾಚೆಗಿನ ಯಾವುದರ ಬಗ್ಗೆಯೂ ಯೋಚಿಸಬೇಡಿ. ಅದನ್ನು ಪೂಜ್ಯಭಾವನೆಯಿಂದ, ಅತ್ಯುತ್ತಮ ಪೂಜೆಯಂತೆ ಮಾಡಿ ಮತ್ತು ಅದಕ್ಕಾಗಿ ನಿಮ್ಮ ಇಡೀ ಜೀವನವನ್ನು ಮುಡಿಪಾಗಿಡಿ."

- ಸ್ವಾಮಿ ವಿವೇಕಾನಂದ

**ಕೆಲವು ಮುಖ್ಯ ಪ್ರಶ್ನೆಗಳು:**

1. ಯಾವ ಯಾವ ಬಗೆಯ ಕೆಲಸಗಳಲ್ಲಿ ಜನರು ನಿರತವಾಗಿದ್ದಾರೆ?
2. ನಮ್ಮ ದಿನಿತ್ಯದ ಜೀವನ ನಿರ್ವಹಣೆಯಲ್ಲಿ ಅವರ ಪಾತ್ರವೇನು?

0681CH13

© NCERT not to be republished

ಅನು ಮತ್ತು ಕಬೀರ್ ಉದ್ಯಾನದಲ್ಲಿ ಆಟವಾಡುತ್ತಿದ್ದಾಗ ಅವರ ನೆರೆಹೊರೆಯ ಗೀತಾ ಚಿಕ್ಕಮ್ಮಳು ಆಟೋದಿಂದ ಇಳಿಯುವುದನ್ನು ನೋಡಿದರು. ಅವಳು ಕೆಲಸದಿಂದ ಮನೆಗೆ ಹಿಂದಿರುಗುತ್ತಿದ್ದು, ತನ್ನ ಸಮವಸ್ತ್ರದಲ್ಲಿದ್ದಳು. ಭಾರತೀಯ ವಾಯುಪಡೆಯಲ್ಲಿ ಪೈಲಟ್ ಆಗಿರುವ ಅವರು ಇಡೀ ಪಟ್ಟಣದ ಹೆಮ್ಮೆಯ ವ್ಯಕ್ತಿಯಾಗಿದ್ದಾರೆ.





... ನೆರೆಹೊರೆಯ ಮಕ್ಕಳಿಗೆ ಉಚಿತ ಭೂಗೋಳಶಾಸ್ತ್ರ ತರಗತಿಗಳನ್ನು ಬೋಧಿಸುತ್ತಾರೆ.



... ನಮ್ಮ ತರಕಾರಿ ತೋಟವನ್ನು ನೋಡಿಕೊಳ್ಳುವುದು, ಮತ್ತು ... ...



...ಮನೆಗಾಗಿ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಾರೆ.



ನನ್ನ ಪೋಷಕರ ಸಮವಸ್ತ್ರ ಮತ್ತು ಇತರ ಸಿದ್ಧ ಉಡುಪುಗಳನ್ನು ಮಾರಾಟ ಮಾಡುವ ಅಂಗಡಿಯನ್ನು ನಡೆಸುತ್ತಿದ್ದಾರೆ. ಅಪ್ಪ ಬೆಳಿಗ್ಗೆ ಬೇಗನೆ ಹೊರಡುತ್ತಾರೆ. ನಾವು ಶಾಲೆಗೆ ಹೊರಟ ನಂತರ ಅಮ್ಮ ಅವರೊಂದಿಗೆ ಅಂಗಡಿ ಸೇರುತ್ತಾಳೆ.



ನಾವು ಶಾಲೆಯಿಂದ ಮನೆಗೆ ಹಿಂದಿರುಗುವ ಹೊತ್ತಿಗೆ ಅಮ್ಮ ಸಾಮಾನ್ಯವಾಗಿ ಹಿಂತಿರುಗುತ್ತಾರೆ. ಸಮುದಾಯದ ಮಹಿಳೆಯರಿಗೆ ಹೆಣಿಗೆಯನ್ನು ಕಲಿಸುವ ಸ್ವಯಂಸೇವಾ ಗುಂಪಿಗೆ ಅವರು ಸಹಾಯ ನೀಡುತ್ತಾರೆ.



ನನ್ನ ಹಿರಿಯ ಸಹೋದರ ರೋಹನ್ ನಿಮಗೆ ನೆನಪಿದೆಯೇ? ಅವನು ನನ್ನನ್ನು ಶಾಲೆಯಿಂದ ಕರೆದೊಯ್ಯಲು ಬಂದಾಗ ನೀವು ಅವನನ್ನು ಭೇಟಿಯಾದಿರಿ. ಅವರು ತಂತ್ರಾಂಶ ಅಭಿಯಂತರರಾಗಿದ್ದಾರೆ ಮತ್ತು ಗಣಕಯಂತ್ರದ ಆನ್ವಯಿಕಗಳನ್ನು (ಅಪ್ಲಿಕೇಷನ್) ತಯಾರಿಸುವ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ವಾರಾಂತ್ಯದಲ್ಲಿ ಅವರು ಸ್ವಯಂಸೇವಕರಾಗಿ ಕೆಲಸ ಮಾಡುತ್ತಾರೆ.



ಅಬ್ಬಾ! ಹೌದಾ ಅನು, ನಮ್ಮ ಸುತ್ತಲಿನ ಪ್ರತಿಯೊಬ್ಬರೂ ಪ್ರತಿದಿನ ಅನೇಕ ಕೆಲಸಗಳನ್ನು ಮಾಡುತ್ತಾರೆ.

© NCERT not to be republished

## ನಾವೀಗ ಅನ್ವೇಷಿಸೋಣ:

ಅನು ಮತ್ತು ಕಬೀರ್ ಅವರ ಸಂಭಾಷಣೆಯಲ್ಲಿ ಜನರು ಯಾವ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ? ಕೆಳಗೆ ಕೊಟ್ಟಿರುವ ಕೋಷ್ಟಕದಲ್ಲಿ ಅವುಗಳನ್ನು ಸೇರಿಸಿರಿ:

| ಸಂಭಾಷಣೆಯಲ್ಲಿನ ಪಾತ್ರ | ಅವರು ತೊಡಗಿಸಿಕೊಂಡಿರುವ ಕೆಲಸಗಳು | |
|---|---|---|
| | | |
| | | |
| | | |
| | | |
| | | |
| | | |
| | | |

ಮೇಲೆ ಚರ್ಚಿಸಿದಂತೆ ವಿವಿಧ ರೀತಿಯ ಕೆಲಸಗಳನ್ನು ಎರಡು ಗುಂಪುಗಳು ಅಥವಾ ವರ್ಗಗಳಾಗಿ ವಿಂಗಡಿಸಲಾಗಿದೆ. ಆರ್ಥಿಕ ಸಂಪಾದನೆಯ ಕೆಲಸಗಳು ಮತ್ತು ಆರ್ಥಿಕೇತರ ಕೆಲಸಗಳು.

**ಆರ್ಥಿಕ ಚಟುವಟಿಕೆಗಳು** ಕೆಲಸಗಳು ಹಣವನ್ನು ಒಳಗೊಂಡಿರುತ್ತವೆ. ಅಥವಾ ಭಾಗಿಯಾಗಿರುವವರಿಗೆ ಹಣ ಅಥವಾ **ಹಣದ ಮೌಲ್ಯದ** ಬದಲಾವಣೆಯು ನಡೆಸಲ್ಪಡುತ್ತವೆ. ಉದಾಹರಣೆಗೆ **ಮಾರುಕಟ್ಟೆಯಲ್ಲಿ** ಶಾಲಾ ಚೀಲಗಳನ್ನು ಮಾರಾಟ ಮಾಡುವ ಉದ್ಯಮಿ, ಮಾರುಕಟ್ಟೆಯಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡುವ ರೈತ, ಪ್ರಕರಣವನ್ನು ವಾದಿಸುವ **ಶುಲ್ಕ**ವನ್ನು ಗಳಿಸುವ ವಕೀಲರು, ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವ ಟ್ರಕ್ ಚಾಲಕರು, ಕಾರು ಉತ್ಪಾದನಾ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರು, ಇತ್ಯಾದಿ.

**ಹಣದ ಮೌಲ್ಯ**: ಒಬ್ಬ ವ್ಯಕ್ತಿಯು ಒಂದು ವಸ್ತುವಿನ ಮೇಲೆ ಇಡುವ ವಿತ್ತೀಯ ಮೌಲ್ಯ. ಆದರಿಂದ ಅವರು ಪಡೆಯುವ ಪ್ರಯೋಜನವನ್ನು ಆಧರಿಸಿರುತ್ತದೆ.

**ಮಾರುಕಟ್ಟೆ:** ಜನರು ಸರಕು ಮತ್ತು ಸೇವೆಗಳ ವಿನಿಮಯದಲ್ಲಿ ತೊಡಗಿರುವ ಸ್ಥಳ. ಜನರು ಇತರ ಸರಕು ಮತ್ತು ಸೇವೆಗಳನ್ನು ವಿನಿಮಯ ಮಾಡಿಕೊಳ್ಳಬಹುದು. ಆದರೆ ಹೆಚ್ಚಿನ ಮಾರುಕಟ್ಟೆಗಳಲ್ಲಿ ಇವುಗಳನ್ನು ಹಣಕ್ಕಾಗಿ ವಿನಿಮಯ ಮಾಡಲಾಗುತ್ತದೆ.

**ಶುಲ್ಕ:** ವೃತ್ತಿಪರ ಸಲಹೆ ಅಥವಾ ಸೇವೆಗಳಿಗೆ ಬದಲಾಗಿ ವ್ಯಕ್ತಿ ಅಥವಾ ಸಂಸ್ಥೆಗೆ ಮಾಡಿದ ಪಾವತಿ. ಉದಾಹರಣೆಗೆ ವೈದ್ಯರು ಮತ್ತು ವಕೀಲರಿಗೆ ಪಾವತಿಸಿದ ಶುಲ್ಕ.

© NCERT not to be republished

ಆರ್ಥಿಕೇತರ ಕೆಲಸಗಳ ಆದಾಯ ಅಥವಾ ಸಂಪತ್ತನ್ನು ಉತ್ಪಾದಿಸುವುದಿಲ್ಲ. ಆದರೆ ಕೃತಜ್ಞತೆಯಂತಹ ಭಾವನೆಗಳಿಂದ ಮಾಡಲ್ಪಡುತ್ತವೆ.

ಎಡದಿಂದ ಬಲಕ್ಕೆ, ಮೇಲಿನಿಂದ ಕೆಳಕ್ಕೆ:

ಮಾರುಕಟ್ಟೆಯಲ್ಲಿ ಶಾಲಾ ಚೀಲಗಳನ್ನು ಮಾರಾಟ ಮಾಡುವ ಉದ್ಯಮಿ.

ರೈತರು ತಮ್ಮ ಫಸಲನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ.

ಪ್ರಕರಣವನ್ನು ವಾದಿಸುತ್ತಿರುವ ವಕೀಲರು.

ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸರಕುಗಳನ್ನು ಸಾಗಿಸುವ ಟ್ರಕ್ ಚಾಲಕ

ಕಾರು ಉತ್ಪಾದನಾ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರು.

ಪ್ರೀತಿ, ಕಾಳಜಿ ಮತ್ತು ಗೌರವ. ಉದಾಹರಣೆಗೆ ಪೋಷಕರು ಕುಟುಂಬಕ್ಕಾಗಿ ಆಹಾರವನ್ನು ಬೇಯಿಸುವುದು. ಅಥವಾ ತಮ್ಮ ಮಕ್ಕಳಿಗೆ ಶಾಲಾ ಕೆಲಸದಲ್ಲಿ ಸಹಾಯ ಮಾಡುವುದು. ಯುವಕರು ಅಜ್ಜಿಯರನ್ನು ನೋಡಿಕೊಳ್ಳುವುದು. ಕುಟುಂಬ ಸದಸ್ಯರು ಮನೆಯ ನವೀಕರಣಕ್ಕೆ ಸಹಾಯ ಮಾಡುವುದು ಇತ್ಯಾದಿ.

ಎಡದಿಂದ ಬಲಕ್ಕೆ:

ಪೋಷಕರು ಕುಟುಂಬಕ್ಕಾಗಿ ಆಹಾರವನ್ನು ಬೇಯಿಸುತ್ತಿದ್ದಾರೆ

ತಾಯಿ ತನ್ನ ಮಕ್ಕಳಿಗೆ ಶಾಲಾ ಕೆಲಸದಲ್ಲಿ ಸಹಾಯ ಮಾಡುತ್ತಾಳೆ.

© NCERT not to be republished

ಎಡದಿಂದ ಬಲಕ್ಕೆ:

ಅಜ್ಜ-ಅಜ್ಜಿಯರನ್ನು ನೋಡಿಕೊಳ್ಳುತ್ತಿರುವ ಯುವಕರು

ಮನೆಯ ನವೀಕರಣಕ್ಕೆ ಸಹಾಯ ಮಾಡುತ್ತಿರುವ ಕುಟುಂಬ ಸದಸ್ಯರು.

## ನಾವೀಗ ಹುಡುಕೋಣ:

ಪುಟ ೧೮೫ ರಲ್ಲಿ ಕೊಟ್ಟಿರುವ ಕೋಷ್ಟಕದಲ್ಲಿ ಮೂರನೆಯ ಖಾಲಿ ಕಾಲಂ ಅನ್ನು ನೀವು ಗಮನಿಸಿದ್ದೀರಾ? ಈ ಅಂಕಣವನ್ನು 'ಆರ್ಥಿಕ / ಆರ್ಥಿಕೇತರ ಚಟುವಟಿಕೆ' ಎಂದು ಶೀರ್ಷಿಕೆ ನೀಡಿ. ಈಗ ಅವುಗಳನ್ನು ಚಟುವಟಿಕೆಯ ಸ್ವರೂಪಕ್ಕೆ ಅನುಗುಣವಾಗಿ ವರ್ಗೀಕರಿಸಿ.

ಅನು ಮತ್ತು ಕಬೀರ್ ಅವರ ಸಂಭಾಷಣೆಯಲ್ಲಿ ವಾಯುಪಡೆಯ ಪೈಲಟ್ ಗೀತಾ ಆಂಟಿ **ಸಂಬಳವನ್ನು** ಪಡೆಯುತ್ತಾರೆ. ಅವಳು ದೇಶಕ್ಕಾಗಿ ಸೇವೆ ಸಲ್ಲಿಸುತ್ತಾಳೆ ಮತ್ತು ಆರ್ಥಿಕ ಚಟುವಟಿಕೆಯನ್ನು ಸಹ ಮಾಡುತ್ತಾಳೆ. ಅನುವಿನ ಸಹೋದರ ರೋಹನ್ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಅದಕ್ಕಾಗಿ ಸಂಬಳವನ್ನು ನೀಡಲಾಗುತ್ತದೆ. ವಾರಾಂತ್ಯದಲ್ಲಿ, ಅವನು ಹತ್ತಿರದ ಕಾಲೇಜಿನ ಯುವ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸ್ವಯಂಸೇವಕನಾಗಿ ಕಾರ್ಯ ನಿರ್ವಹಿಸುತ್ತಾನೆ. ಅಲ್ಲಿ ಅವರು ಯುವಕರಿಗೆ ಕಂಪ್ಯೂಟರ್ ಕೌಶಲ್ಯಗಳನ್ನು ಕಲಿಸುತ್ತಾರೆ. ಇದು ಆರ್ಥಿಕೇತರ ಚಟುವಟಿಕೆಯಾಗಿದೆ.

**ಸಂಬಳ:** ಸಾಮಾನ್ಯವಾಗಿ ಉದ್ಯೋಗದಾತರು ಉದ್ಯೋಗಿಗೆ ಮಾಸಿಕ ಪಾವತಿಸುವ ನಿಗದಿತ ನಿಯಮಿತ ಪಾವತಿ.

## ಇದನ್ನು ಕುರಿತು ಆಲೋಚಿಸಿ:

- ಕಬೀರ್ ಅವರ ಅಜ್ಜ ಸ್ವಯಂಪ್ರೇರಣೆಯಿಂದ ನೆರೆಹೊರೆಯ ಮಕ್ಕಳಿಗೆ ಉಚಿತವಾಗಿ ಕಲಿಸಿದಾಗ, ಅದು ಆರ್ಥಿಕ ಚಟುವಟಿಕೆಯೇ ಅಥವಾ ಆರ್ಥಿಕೇತರ ಚಟುವಟಿಕೆಯೇ? ಶಾಲೆಯಲ್ಲಿ ನಿಮ್ಮ ಶಿಕ್ಷಕರು ನಿಮಗೆ ಕಲಿಸುವುದಕ್ಕಿಂತ ಇದು ಹೇಗೆ ಭಿನ್ನವಾಗಿದೆ? ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ.
- ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಮುಖ್ಯವಾದ ಕೆಲವು ಆರ್ಥಿಕೇತರ ಚಟುವಟಿಕೆಗಳು ಯಾವುವು? ಅವು ಏಕೆ ಅಮೂಲ್ಯವಾದವು?

© NCERT not to be republished

## ಆರ್ಥಿಕ ಚಟುವಟಿಕೆಗಳ ವಿಧಗಳು

ಕಮಲಾಪುರ ಗ್ರಾಮದಲ್ಲಿರುವ ತನ್ನ ಚಿಕ್ಕಮ್ಮನ ಮನೆಗೆ ಹೋಗಲು ಕಾವ್ಯಾ ಉತ್ಸುಕಳಾಗಿದ್ದಳು. ದಾರಿಯಲ್ಲಿ, ಹಳ್ಳಿಯ ಬಳಿ ಹೆದ್ದಾರಿಯನ್ನು ನಿರ್ಮಿಸುತ್ತಿರುವುದನ್ನು ಅವಳು ನೋಡಿದಳು. ನಿರ್ಮಾಣ ಸ್ಥಳವು ಚಟುವಟಿಕೆಯಿಂದ ಕೂಡಿತ್ತು. ಅಗೆಯುವ ಯಂತ್ರಗಳು ಮತ್ತು ಬುಲ್ಡೋಜರ್ ಗಳಂತಹ ದೊಡ್ಡ ಯಂತ್ರಗಳನ್ನು ಪರಿಣಿತ ತಂತ್ರಜ್ಞರು ನಿರ್ವಹಿಸುತ್ತಿದ್ದರು.



[redacted]

ಈ ಹೊಸ ಹೆದ್ದಾರಿಯು ಹತ್ತಿರದ ಪಟ್ಟಣಕ್ಕೆ ಪ್ರಯಾಣದ ಸಮಯವನ್ನು ಐದು ಗಂಟೆಗಳಿಂದ ಕೇವಲ ಎರಡು ಗಂಟೆಗಳಿಗೆ ಇಳಿಸುವ ಭರವಸೆ ನೀಡಿತು. ಹೆದ್ದಾರಿ ಸಿದ್ಧವಾದ ನಂತರ ತನ್ನ ಚಿಕ್ಕಮ್ಮನನ್ನು ಹೆಚ್ಚಾಗಿ ಭೇಟಿ ಮಾಡಲು ಸಾಧ್ಯವಾಗುತ್ತದೆ ಎಂದು ಕಾವ್ಯಾ ಭಾವಿಸಿದಳು. ಏಕೆಂದರೆ ಅಲ್ಲಿಗೆ ಪ್ರಯಾಣಿಸಲು ಕಡಿಮೆ ಸಮಯ ತೆಗೆದುಕೊಳ್ಳುತ್ತದೆ. ಈ ಆಲೋಚನೆಯಿಂದ ಸಂತೋಷಗೊಂಡ ಕಾವ್ಯಾ ತನ್ನ ಚಿಕ್ಕಮ್ಮನನ್ನು ಸ್ವಾಗತಿಸಲು, ಅವಳು ತಯಾರಿಸಿದ ರುಚಿಕರವಾದ ಜಿಲೇಬಿಗಳನ್ನು ತಿನ್ನಲು ಒಡಿದಳು. ಆಗತಾನೇ ಕೆಲಸದಿಂದ ಮನೆಗೆ ಹಿಂದಿರುಗಿದ್ದ ಕಾವ್ಯಾಳ ಚಿಕ್ಕಪ್ಪ ಅವರೊಂದಿಗೆ ಸೇರಿಕೊಂಡರು. ಅವನು ನಿರ್ಮಾಣ ಕಂಪನಿಯಲ್ಲಿ ತಂತ್ರಜ್ಞರಾಗಿದ್ದಾರೆ. ಬುಲ್ಡೋಜರ್ ಅನ್ನು ನಿರ್ವಹಿಸುತ್ತಾರೆ. ಅವರು ತಮ್ಮ ಸೇವೆಗಳಿಗಾಗಿ ಮಾಸಿಕ ಸಂಬಳವನ್ನು ಪಡೆಯುತ್ತಾರೆ.

[redacted]

ಮರುದಿನ ಕಾವ್ಯಾಳ ಚಿಕ್ಕಮ್ಮ ತನ್ನ ಪಾಲಿನ ಮನೆಕೆಲಸಗಳನ್ನು ಮುಗಿಸಲು ಬೇಗನೆ ಎದ್ದು ಕೆಲಸಕ್ಕೆ ಹೊರಟಳು. ಅವಳು ಹಳ್ಳಿಯ ಅಂಚೆ ಕಚೇರಿಯಲ್ಲಿ ಉದ್ಯೋಗದಲ್ಲಿದ್ದಾಳೆ.

© NCERT not to be republished

[redacted]

ಮಾಸಿಕ ಸಂಬಳವನ್ನು ನೀಡಲಾಗುತ್ತದೆ. ಸಂಜೆ ತನ್ನ ಕಚೇರಿ ಕೆಲಸದ ನಂತರ ಶಾಲಾ ಪರೀಕ್ಷೆಗಳಿಗೆ ತಯಾರಿ ನಡೆಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಅವರು ಆನ್‌ಲೈನ್ ತರಗತಿಗಳನ್ನು ಸಹ ನಡೆಸುತ್ತಾರೆ. ಅವಳು ಈ ತರಗತಿಗಳಿಗೆ ವಾರದ ಶುಲ್ಕವನ್ನು ವಿಧಿಸುತ್ತಾಳೆ.

ವಾರಾಂತ್ಯದಲ್ಲಿ ಕಾವ್ಯಾ ತನ್ನ ಚಿಕ್ಕಮ್ಮನೊಂದಿಗೆ ಕೆಲವು ರುಚಿಕರವಾದ ಮಾವಿನಹಣ್ಣುಗಳನ್ನು ತಿನ್ನಲು ಸ್ಥಳೀಯ ಮಾವಿನ ತೋಟಕ್ಕೆ ಭೇಟಿ ನೀಡಿದಳು.

ಅಲ್ಲಿ ಅವಳು ಹತ್ತಿರದ ರೈತನ ಭೂಮಿಯನ್ನು ಉಳುಮೆ ಮಾಡಲು ಟ್ರ್ಯಾಕ್ಟರ್ ಬಳಸುತ್ತಿದ್ದ ಕೃಷಿ ಕಾರ್ಮಿಕ ಸಾಹಿಲ್ ನನ್ನು ನೋಡಿದಳು. ಅವನು ತನ್ನ ಕೆಲಸದಿಂದ ದಿನಗೂಲಿಯನ್ನು ಗಳಿಸುತ್ತಾನೆ. ಅವನು ತನ್ನ ಕೆಲಸಕ್ಕೆ ಸ್ವಲ್ಪ ಪಾವತಿಯನ್ನು ನಗದು ರೂಪದಲ್ಲಿ ಪಡೆಯುತ್ತಾನೆ. ಪಾವತಿಯ ಉಳಿದ ಭಾಗವನ್ನು ಸಮಾನ ಮೌಲ್ಯದ ಮಾವಿನಹಣ್ಣಿನ ರೂಪದಲ್ಲಿ ಪಡೆಯುತ್ತಾನೆ. ಅವನು ತನ್ನ ಕೆಲಸದ ಭಾಗವಾಗಿ ಪಡೆಯುವ ಮಾವಿನಹಣ್ಣುಗಳನ್ನು ವಸ್ತುವಿನ ಪಾವತಿ ಎಂದು ಕರೆಯಲಾಗುತ್ತದೆ.

**ಇದರ ಕುರಿತು ಆಲೋಚಿಸಿ:**

ಇಂದು ನೀವು ಮನೆಯಿಂದ ಶಾಲೆಗೆ ಹೋಗುವಾಗ ಜನರು ತೊಡಗಿರುವ ವಿವಿಧ ಆರ್ಥಿಕ ಕೆಲಸಗಳನ್ನು ನೀವು ನೆನಪಿಸಿಕೊಳ್ಳಬಲ್ಲಿರಾ? ಆ ಜನರಿಗೆ ಯಾವ ರೀತಿಯಲ್ಲಿ ಹಣ ಪಾವತಿಸಲಾಗುತ್ತದೆ ಎಂದು ನೀವು ಭಾವಿಸುತ್ತೀರಿ?

ನಾವು ಈಗ ಅರ್ಥಮಾಡಿಕೊಂಡಂತೆ ಆರ್ಥಿಕ ಚಟುವಟಿಕೆಗಳು ಹಣದ ವಿಷಯದಲ್ಲಿ ಮೌಲ್ಯವನ್ನು ಹೊಂದಿವೆ. ಆರ್ಥಿಕ ಚಟುವಟಿಕೆಗಳು ಕೆಲವು ವಸ್ತುಗಳನ್ನು ಮತ್ತೊಂದು ರೂಪಕ್ಕೆ ಪರಿವರ್ತಿಸುವ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲೂ ಮೌಲ್ಯವನ್ನು ಸೇರಿಸುತ್ತವೆ. ಇದನ್ನು ಮೌಲ್ಯವರ್ಧನೆ ಎಂದು ಕರೆಯಲಾಗುತ್ತದೆ.

[redacted]

**ವೇತನ:** ಉದ್ಯೋಗದಾತನು ಕಾರ್ಮಿಕರಿಗೆ ಒಂದು ನಿರ್ದಿಷ್ಟ ಅವಧಿಗೆ ಮಾಡಿದ ಪಾವತಿ.

**ವೇತನರಹಿತ ಪಾವತಿ:** ನಿರ್ವಹಿಸಿದ ಕೆಲಸಕ್ಕೆ ಪಡೆದ ನಗದು ರಹಿತ ಪಾವತಿ.

© NCERT not to be republished

ಇದನ್ನು ಅರ್ಥಮಾಡಿಕೊಳ್ಳಲು ಕಾವ್ಯಾಳ ತಂದೆ ರಾಜೇಶ್ ಅವರ ಉದಾಹರಣೆಯನ್ನು ತೆಗೆದುಕೊಳ್ಳೋಣ.

ರಾಜೇಶ್ ಒಬ್ಬ ಬಡಿಗನಾಗಿದ್ದು. ಪೀಠೋಪಕರಣಗಳನ್ನು ತಯಾರಿಸಲು ಹತ್ತಿರದ ಮಾರುಕಟ್ಟೆಯಿಂದ ೬೦೦ ರೂ.ಗೆ ಮರದ ತುಂಡು/ಕಟ್ಟಿಗೆಗಳನ್ನು ಖರೀದಿಸುತ್ತಾನೆ.

ಪೀಠೋಪಕರಣಗಳನ್ನು ನಿರ್ಮಿಸಲು ಅವರು ವಿಶೇಷ ಉಪಕರಣಗಳು ಮತ್ತು ಇತರ ವಸ್ತುಗಳನ್ನು ಬಳಸುತ್ತಾರೆ.

ರಾಜೇಶ್ ಒಂದು ಕುರ್ಚಿಯನ್ನು ಮಾರುಕಟ್ಟೆಯಲ್ಲಿ ತಲಾ ₹ ೧,೦೦೦ ಕ್ಕೆ ಮಾರಾಟ ಮಾಡುತ್ತಾನೆ.

ಕುರ್ಚಿಗೆ ಕಟ್ಟಿಗೆಯ ಬೆಲೆ ₹ ೬೦೦. ಹಾಗಾದರೆ ಉಳಿದ ₹ ४೦೦ (₹ ೧,೦೦೦ - ₹ ೬೦೦) ಯಾವುದಕ್ಕೆ? ರಾಜೇಶ್ ಅವರ ಕೌಶಲ್ಯ, ಸಮಯ ಮತ್ತು ಕೆಲಸದ ಮೌಲ್ಯವು ಆ ಕುರ್ಚಿಯನ್ನು ತಯಾರಿಸಲು ಕಾರಣವಾಯಿತು. ರಾಜೇಶ್ ಮರವನ್ನು ಪೀಠೋಪಕರಣಗಳಾಗಿ ಪರಿವರ್ತಿಸುವ ಮೂಲಕ ಅದಕ್ಕೆ ಮೌಲ್ಯವನ್ನು ಸೇರಿಸಿದ್ದಾರೆ. ಕಟ್ಟಿಗೆಯನ್ನು ಖರೀದಿಸುವುದರಿಂದ ಹಿಡಿದು ಕುರ್ಚಿಯನ್ನು ಮಾರಾಟ ಮಾಡುವವರೆಗೆ ಈ ಕೆಲಸಗಳು ಪಾವತಿಯನ್ನು ಒಳಗೊಂಡಿರುತ್ತವೆ. ಆದ್ದರಿಂದ ಅವು ಆರ್ಥಿಕ ಚಟುವಟಿಕೆಗಳ ಒಂದು ಭಾಗವಾಗಿದೆ.



© NCERT not to be republished

## ನಾವೀಗ ಹುಡುಕೋಣ

ಹಣದ ಮೌಲ್ಯವನ್ನು ಸೃಷ್ಟಿಸುತ್ತದೆ ಎಂದು ನೀವು ಭಾವಿಸುವ ಕೆಲಸಗಳು / ವೃತ್ತಿಗಳ ವಿರುದ್ಧ ಹಾಕಿ. ಕೊನೆಯಲ್ಲಿ, ಖಾಲಿ ಸಾಲುಗಳಿಗೆ ಹಣ ಸಂಬಂಧಿತ ಮೌಲ್ಯ ಸೃಷ್ಟಿಯ ಎರಡು ಕೆಲಸಗಳು ಮತ್ತು ಉದಾಹರಣೆಗಳನ್ನು ನೀವು ಸೇರಿಸಬಹುದೇ?

| ಕೆಲಸ / ವೃತ್ತಿ | ಹಣ-ಸಂಬಂಧಿತ ಮೌಲ್ಯ ಸೃಷ್ಟಿಯ ಉದಾಹರಣೆ |
|---|---|
| 1. ಬೇಕರಿ | |
| 2. ಟೈಲರ | |
| 3. ರೈತರು ತಮ್ಮ ಟ್ರ್ಯಾಕ್ಟರ್ ರಿಪೇರಿ ಮಾಡುತ್ತಿದ್ದಾರೆ | |
| 4. ವೈದ್ಯರು | |
| 5. ಪೋಷಕರು ತಮ್ಮ ಕುಟುಂಬಕ್ಕೆ ಊಟವನ್ನು ತಯಾರಿಸುತ್ತಾರೆ. | |
| 6. ವಿಜ್ಞಾನಿ | |
| 7. ಅನಾರೋಗ್ಯದಿಂದ ಬಳಲುತ್ತಿರುವ ಅಜ್ಜಿಯನ್ನು ನೋಡಿಕೊಳ್ಳುವ ವ್ಯಕ್ತಿ. | |
| 8. | |
| 9. | |

# ಆರ್ಥಿಕೇತರ ಚಟುವಟಿಕೆಗಳ ಪ್ರಾಮುಖ್ಯತೆ:

ಆರ್ಥಿಕೇತರ ಚಟುವಟಿಕೆಗಳು ಹಣದ ಪಾವತಿಸುವಿಕೆಯನ್ನು ಒಳಗೊಂಡಿರುವುದಿಲ್ಲ. ಅವು ಉತ್ಪಾದಿಸುವ ಮೌಲ್ಯವು ನಮ್ಮ ಜೀವನದಲ್ಲಿ ಮುಖ್ಯವಾಗಿದೆ.

### ಸೇವೆ: ನಿಸ್ವಾರ್ಥ ಮನೋಭಾವದಿಂದ ಮಾಡುವ ಕೆಲಸ.

ದೇವಾಲಯ, ಗುರುದ್ವಾರ, ಮಸೀದಿ ಮತ್ತು ಚರ್ಚುಗಳಂತಹ ಅನೇಕ ಸ್ಥಳಗಳಲ್ಲಿ ಸೇವೆಯನ್ನು ನೋಡಿ. ಉದಾಹರಣೆಗೆ ಗುರುದ್ವಾರಗಳಲ್ಲಿನ ಸಮುದಾಯ ಸೇವಾದಾರರು ಪ್ರತಿಯೊಬ್ಬ ಸಂದರ್ಶಕರಿಗೆ ಉಚಿತವಾಗಿ ಆಹಾರವನ್ನು ಒದಗಿಸುತ್ತಾರೆ. ಸೇವೆಯ ಚಟುವಟಿಕೆಗಳು ತೃಪ್ತಿ ಮತ್ತು ಕೃತಜ್ಞತೆಯ ಪ್ರಜ್ಞೆಯನ್ನು ಬೆಳೆಸುತ್ತವೆ. ನಮ್ಮ ಬಳಿ

© NCERT not to be republished

ಏನಿದೆಯೋ ಅದನ್ನು ಪ್ರತಿಯಾಗಿ ಏನನ್ನೂ ನಿರೀಕ್ಷಿಸದೆ ಸಮಾಜಕ್ಕೆ ಕೊಡುಗೆ ನೀಡುವ ಒಂದು ಮಾರ್ಗವಾಗಿದೆ.



ಮಂದಿರದಲ್ಲಿ ಭಕ್ತಾದಿಗಳಿಗೆ ಪ್ರಸಾದ ವಿತರಣೆ



ಸ್ವರ್ಣ ಮಂದಿರದಲ್ಲಿ ಭಕ್ತರಿಗೆ ಪ್ರಸಾದ ವಿತರಣೆ



ಸ್ವಚ್ಛ ಭಾರತ ಅಭಿಯಾನದ ಚಟುವಟಿಕೆ



ವನಮಹೋತ್ಸವ

## ಸಮುದಾಯದ ಶಕ್ತಿಯಾಗಿ ಪಾಲ್ಗೊಳ್ಳುವಿಕೆ:

ಸ್ವಚ್ಛ ಭಾರತ ಅಭಿಯಾನವು ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿಡಲು ಎಲ್ಲಾ ಭಾರತೀಯ ನಾಗರಿಕರ ಸಾಮೂಹಿಕ ಪ್ರಯತ್ನಗಳನ್ನು ಆಧರಿಸಿದೆ. ವೈಯಕ್ತಿಕವಾಗಿ ನಾವು ನಮ್ಮ ಮನೆಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿರಿಸುತ್ತೇವೆ. ಬೀದಿಗಳು, ರಸ್ತೆಗಳನ್ನು ಸ್ವಚ್ಛಗೊಳಿಸಲು ಜನರು ಒಗ್ಗೂಡಬೇಕು.

ಉದ್ಯಾನವನಗಳು, ಇತರ ಸಾರ್ವಜನಿಕ ಸ್ಥಳಗಳು ಅಥವಾ ಸಮುದಾಯ ಪ್ರದೇಶಗಳು. ಒಟ್ಟಾಗಿ ಈ ಪ್ರಯತ್ನಗಳಿಂದ ಸ್ವಚ್ಛ ಮನೆ, ನೆರೆಹೊರೆ, ಸಮಾಜ ಮತ್ತು ರಾಷ್ಟ್ರಕ್ಕೆ ಕಾರಣವಾಗುತ್ತವೆ.

ಮರಗಳ ಮಹತ್ವ ಮತ್ತು ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ಭಾರತದಲ್ಲಿ ವನ ಮಹೋತ್ಸವವನ್ನು (ಅರಣ್ಯಗಳ ಹಬ್ಬ) ಆಚರಿಸುವುದು. ಇದು ಸಾಮೂಹಿಕ ಸಮುದಾಯದ ಭಾಗವಹಿಸುವಿಕೆಯ ಮತ್ತೊಂದು

© NCERT not to be republished

ಉದಾಹರಣೆಯಾಗಿದೆ. ಈ ಉಪಕ್ರಮವು ಮರ ನೆಡುವ ಅಭಿಯಾನಗಳಿಗೆ ಸಮುದಾಯದ ಸದಸ್ಯರನ್ನು ಒಟ್ಟು ಗೂಡಿಸುತ್ತದೆ.

**ಇದರ ಕುರಿತು ಆಲೋಚಿಸಿ:**

- ಭಾರತದಲ್ಲಿನ ಅನೇಕ ಸಮುದಾಯಗಳು, ಸಮುದಾಯದ ಭಾಗವಹಿಸುವಿಕೆಯನ್ನು ಒಳಗೊಂಡಿರುವ ಇದೇ ರೀತಿಯ ಅಭ್ಯಾಸಗಳನ್ನು ಹೊಂದಿವೆ. ನಿಮ್ಮ ಪ್ರದೇಶದಿಂದ ಕೆಲವರನ್ನು ನೀವು ಗುರುತಿಸಬಹುದೇ?
- ನಾವು ಭಾರತದಲ್ಲಿ ಅನೇಕ ಹಬ್ಬಗಳನ್ನು ಆಚರಿಸುತ್ತೇವೆ. ಈ ಹಬ್ಬಗಳ ಸಮಯದಲ್ಲಿ ಜನರು ಎಲ್ಲಾ ವಿವಿಧ ಚಟುವಟಿಕೆಗಳನ್ನು ಆಯೋಜಿಸಲು ಒಟ್ಟುಗೂಡುತ್ತಾರೆ. ಅವರು ಒಟ್ಟಿಗೆ ಸ್ಥಳವನ್ನು ಸಿಂಗರಿಸುತ್ತಾರೆ. ಅವರು ಬೇಯಿಸಿದ ಆಹಾರವನ್ನು ಹಂಚಿಕೊಳ್ಳುತ್ತಾರೆ. ಇವು ಆರ್ಥಿಕೇತರ ಚಟುವಟಿಕೆಗಳೇ? ಅವು ಇನ್ನೂ ಮೌಲ್ಯವನ್ನು ಹೊಂದಿವೆ ಎಂದು ನೀವು ಏಕೆ ಭಾವಿಸುತ್ತೀರಿ?
- ನಿಮ್ಮ ಶಾಲೆ ಅಥವಾ ನಿಮ್ಮ ಪ್ರದೇಶದಲ್ಲಿ ಕೈಗೊಂಡಿರುವ ಸಮುದಾಯ ಕಾರ್ಯಕ್ರಮಗಳನ್ನು ನೀವು ಗುರುತಿಸಬಹುದೇ? ಈ ಕಾರ್ಯಕ್ರಮಗಳಲ್ಲಿ ನೀವು ಏನನ್ನು ಗಮನಿಸಿದ್ದೀರಿ?

## ನಾವು ಮುಂದುವರಿಯುವ ಮೊದಲು......

→ ಈ ಅಧ್ಯಾಯದಲ್ಲಿ ನಾವು ಆರ್ಥಿಕ ಮತ್ತು ಆರ್ಥಿಕೇತರ ಚಟುವಟಿಕೆಗಳ ಬಗ್ಗೆ ಕಲಿತಿದ್ದೇವೆ.

→ ಆರ್ಥಿಕ ಚಟುವಟಿಕೆಗಳು ಸೃಷ್ಟಿಸುವ ಮೌಲ್ಯವರ್ಧನೆಯ ಬಗ್ಗೆಯೂ ನಾವು ಕಲಿತಿದ್ದೇವೆ.

→ ಆರ್ಥಿಕೇತರ ಚಟುವಟಿಕೆಗಳು ಸಾಮಾಜಿಕ ಕಲ್ಯಾಣ, ವೈಯಕ್ತಿಕ ಯೋಗಕ್ಷೇಮಕ್ಕೆ ಹೇಗೆ ಕೊಡುಗೆ ನೀಡುತ್ತವೆ?. ಒಟ್ಟಾರೆ ಜೀವನದ ಗುಣಮಟ್ಟವನ್ನು ಹೇಗೆ ಹೆಚ್ಚಿಸುತ್ತವೆ ಎಂಬುದನ್ನು ನಾವು ಅರ್ಥಮಾಡಿಕೊಂಡಿದ್ದೇವೆ.

## ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

1. ಆರ್ಥಿಕ ಚಟುವಟಿಕೆಗಳು ಆರ್ಥಿಕೇತರ ಚಟುವಟಿಕೆಗಳಿಗಿಂತ ಹೇಗೆ ಭಿನ್ನವಾಗಿವೆ?
2. ಜನರು ಯಾವ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ? ಉದಾಹರಣೆಗಳೊಂದಿಗೆ ವಿವರಿಸಿ.
3. ಸಮುದಾಯ ಸೇವಾ ಚಟುವಟಿಕೆಗಳಲ್ಲಿ ತೊಡಗಿರುವ ಜನರಿಗೆ ಹೆಚ್ಚಿನ ಮೌಲ್ಯವಿದೆ. ಈ ಹೇಳಿಕೆಯ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆಯಿರಿ.
4. ವಿವಿಧ ಆರ್ಥಿಕ ಚಟುವಟಿಕೆಗಳಿಗೆ ಜನರಿಗೆ ಪರಿಹಾರ ನೀಡುವ ವಿವಿಧ ವಿಧಾನಗಳು ಯಾವುವು? ಕೆಲವು ಉದಾಹರಣೆಗಳನ್ನು ನೀಡಿ.



© NCERT not to be republished

# ಅಭ್ಯಾಸ ಟಿಪ್ಪಣಿ

© NCERT not to be republished

*''ನೂಡಲ್ಸ್' ಎಂಬುದು 'ನೋಟ್ಸ್ ಅಂಡ್ ಡೂಡಲ್ಸ್ ಗಳಿಗಾಗಿ' ನಮ್ಮ ಸಂಕ್ಷಿಪ್ತ ರೂಪವಾಗಿದೆ.!

